ಅಧ್ಯಕ್ಷರು.—ಈವಾಗ ತಾನೇ ಮಂತ್ರಿಗಳು ಅದಕ್ಕೆ ಉತ್ತರ ಹೇಳಿದರಲ್ಲಾ, ಮತ್ತೇಕೆ ತಿರುಗಿ, ತಿರುಗಿ ಕೇಳುತ್ತಿದ್ದೀರಿ ?

ಶ್ರೀ ಜಿ. ಎಲ್. ಕಬಾಡಿ.—ನಾನು ಕೇಳಿದ್ದು ಏನೆಂದರೆ ಸರ್ಕಾರದವರು ಹಿಂದೆ ಆಶ್ವಾಸನೆ ಕೊಟ್ಟ ಪ್ರಕಾರ ಅವರಿಗೆ 2 ವರ್ಷದಿಂದಲೂ ಪರಿಹಾರ ಧನ ಸಿಕ್ಕಿಲ್ಲ. ಸಿಕ್ಕಬೇಕಾದ ಹಣವೂ ಅವರಿಗೆ ಸಿಕ್ಕಿಲ್ಲ. ಆದುದರಿಂದ ಅವರು ಅನ್ನ ಸತ್ಯಾಗ್ರಹವನ್ನು ಕೈಗೊಳ್ಳುತ್ತೇವೆ ಎಂದು ತಂತಿ ನನಗೂ ಕಳುಹಿಸಿದ್ದಾರೆ, ತಮಗೂ ಕಳುಹಿಸಿದ್ದಾರೆ, ಅದರಿಂದ ನಾನು ಇದನ್ನು ಮತ್ತೆ ಮತ್ತೆ ಒತ್ತಿ ಕೇಳಬೇಕಾಗಿದೆ. ತಾವು ಇದಕ್ಕೆ ಏನು ಉತ್ತರ ಹೇಳುತ್ತೀರಾ ?

Sri H. M. CHANNABASAPPA.—When Government has held out in specific assurance that 75 per cent will be given straight away, it will be given.

ಶ್ರೀ ಎಂ. ಎಂ. ನಜ್ಜನ್.—ತಾವು ಹೇಳಿದ ಮೇರೆಗೆ ತಮ್ಮ ಗಮನಕ್ಕೆ ಒಂದು ವಿಷಯ ತರುತ್ತೇನೆ. ಶೇಕಡ 75ರಷ್ಟು ಹಣ ಕೊಡುತ್ತೇವೆ ಎಂದು ಏನು ಹೇಳಿದಿರಿ ಅದು ಲ್ಯಾಂಡ್ ಅಕ್ವಿಸಿಷನ್ ಆಕ್ಟ್ 6 (ಎ) ಪ್ರಕಾರ ಅಡ್ವಾನ್ಸ್ ಆಗಿ ಕೊಡುವುದಕ್ಕೆ ಬರುವುದಿಲ್ಲ. ಹೀಗಿರುವುದರಿಂದ ಆ ನಿಯಮವನ್ನು ಈ ಅಡ್ವಾನ್ಸ್ ಕೊಡುವ ಕಾಲಕ್ಕೆ ತೆಗೆದು ಹಾಕುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಿಯಮವನ್ನು ತೆಗೆದು ಹಾಕುವ ಸಂದರ್ಭ ಬರುವುದಿಲ್ಲ. ಆ ಆಕ್ಟ್‌ನಲ್ಲಿ ಆ ನಿಯಮ ಇಲ್ಲದಿದ್ದರೂ ಕೂಡ ಅದರಲ್ಲಿ ಒಂದು ನೋಟಿಫಿಕೇಷನ್ ಮಾಡಿ ಕೊಡಬಹುದು Nothing prevents Government from giving advance compensation just to alleviate the difficulty.

ಶ್ರೀ ಜೆ. ಎಲ್. ಕಬಾಡಿ.—ಈಗ ತಾವು ಕೊಟ್ಟಿರುವ ಮಾಹಿತಿ ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ತಾವು ಸ್ಥಳ ಪರಿಶೀಲನೆ ಮಾಡಬೇಕು. ಏತಕ್ಕೆಂದರೆ ಒಂದು ಉದಾಹರಣೆ ಹೇಳುವುದಾದರೆ ಅವರು ಸ್ವಾಧೀನ ಮಾಡಿಕೊಡ ಜಮೀನು 10 ಎಕರೆ ಆದರೆ ಇವರು ಅದನ್ನು 2 ಎಕರೆ ಯಂತಲೋ ಅಥವಾ 4 ಗುಂಟೆಯಂತಲೋ ತಿಳಿದುಕೊಂಡು ಪರಿಹಾರ ಧನ ಕೊಟ್ಟಿದ್ದಾರೆ. ಆದುದರಿಂದ ಸ್ಥಳ ಪರಿಶೀಲನೆ ಮಾಡಿ ಅವರು ಏನು ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೊ ಅದಕ್ಕೆ ಸಿಗಬೇಕಾದಂಥ ಪರಿಹಾರ ಎಷ್ಟು ಸಿಗಬೇಕೋ ಅಷ್ಟು ಕೊಡಿಸುವುದಕ್ಕೆ ಮಾನ್ಯ ಮಂತ್ರಿಗಳು ಯೋಚನೆ ಮಾಡುತ್ತಾರೆಯೇ ?

Sri H. M. CHANNABASAPPA.—In all cases of acquisition, it is not the function of the Minister but there are officers who will actually visit and find out to what extent land is repuired ; and if there is any mistake, it is open to the Hon. Member to bring it to the notice of the Deputy Commissioner or the concerned authority, and not ask the Minister to go and make spot inspection in this behalf.

FOODGRAINS TO VULNERABLE SECTIONS OF THE PEOPLE

224. Sri K. SIDDAIAH (Santhemarahalli).—

Will the Minister for Food and Forests be pleased to state :—

(*a*) the specific method adopted to distribute foodgrains to vulnerable sections of the people in rural parts ;

(*b*) whether any instructions have been issued by Government defining " vulnerable sections " for the purpose of distribution of foodgrains in rural parts ;

(*c*) if so, the number and date of Government Order under which such instructions have been issued ?

Sri K. H. PATIL (Minister for Food and Forests).—

(*a*) Foodgrains are being distributed to the public in rural parts on an *ad hoc* basis at a rate not exceeding 5 Kgs. per adult per month, in aggregate rice, wheat and other foodgrains depending upon the availability of stocks.

(b) No. But in general terms, vulnerable is being read to mean weaker sections of the population of the society who on account of their economic condtion will be adversely affected by the inadequate availability of essential commodities in the market and the rise in price of such commodities.

(*c*) Does not arise in view of reply to clause (*b*).

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ, ನಾನು whether any instructions have been issued by Government specifying "vulnerable sections" for the purpose of distribution of foodgrains in rural parts ಎಂದು ಕೇಳಿದ್ದೇನೆ. ಈ ರೀತಿ specifying "vulnerable sections" ಅಂತ ಇದ್ದುದನ್ನು "defining vulnerable sections" ಎಂದು ಮಾಡಿದ್ದೀರಿ, ಇದನ್ನು ಏತಕ್ಕೆ ಛೇಂಜ್ ಮಾಡಿದರೋ ಗೊತ್ತಿಲ್ಲ.

ಎರಡನೆಯದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡುವ ಉದ್ದೇಶಕ್ಕಾಗಿ "ದುರ್ಬಲ" ವರ್ಗದವರ ಪಟ್ಟಿಯನ್ನು ಮಾಡಿದ್ದಾರೆಯೇ ಎಂದರೆ ಅದನ್ನು ಅವರ ಡಿಸ್ಕ್ರಿಪ್ಷನ್‌ಗೇನೇ ಬಿಟ್ಟು ಬಿಟ್ಟಿದ್ದಾರೆ. ಆದುದರಿಂದ ಅವರು ಈ ದಿನಸಿಗಳನ್ನು ವಿತರಣೆ ಮಾಡುವಾಗ ಬಡವರ ಪಟ್ಟಿಯೊಂದನ್ನು ಮಾಡಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಹಂಚಿದ್ದಾರೆಯೇ?

†ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಕೇಳಿದ (ಅ) ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಅದನ್ನು ಅವರು ನೋಡಲಿಲ್ಲ ಎಂದು ಕಾಣುತ್ತದೆ.

ಇನ್ನು ಎರಡನೇ ಪ್ರಶ್ನೆಗೆ ಉತ್ತರ ಹೇಳುವುದಾದರೆ ನೀವು ವಲ್‌ನರಬಲ್ ಸೆಕ್ಷನ್ ಪೀಪಲ್ ಯಾರು ಯಾರು ಎಂದು ತಿಳಿಸಿದರೆ ನಾನು ಅದನ್ನು ತಿಳಿದುಕೊಳ್ಳುತ್ತೇನೆ. ಅದಕ್ಕೆ ನಾನು ಆಭಾರಿಯಾಗಿದ್ದೇನೆ. It is very difficult for the Government to define in clear terms which is vulnerable section.

ಶ್ರೀ ಕೆ. ಸಿದ್ದಯ್ಯ.—ಈ ಪ್ರಶ್ನೆಗೆ ಹಿಂದೆಯೇ ಮಾನ್ಯ ಆಹಾರ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ವಲ್‌ನರಬಲ್ ಸೆಕ್ಷನ್ ಯಾರು ಯಾರು ಎಂದು ಕೇಳಿದಾಗ ಹರಿಜನರು, ಗಿರಿಜನರು ಮತ್ತು ಇತರರು ಅಂದರೆ ಬಡವರು ಎಂದು ಉತ್ತರ ಕೊಟ್ಟಿದ್ದಾರೆ. ಹಿಂದಿನ ಸೆಷನ್‌ನಲ್ಲಿ ಅವರು ಈ ಬಗ್ಗೆ ಇನ್‌ಸ್ಟ್ರಕ್ಷನ್ ಕೊಟ್ಟು ಈ ರೀತಿಯಾಗಿ ಒಂದು ಪಟ್ಟಿ ಮಾಡಿ ಫುಡ್ ಗ್ರೈನ್ಸ್ ತೆಗೆದುಕೊಂಡು ಒಬ್ಬೊಬ್ಬರಿಗೆ 5 ಕೆ. ಜಿ. ಪ್ರಕಾರ ಹಂಚಬೇಕು ಎಂದು ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಹರಿಜನ ಗಿರಿಜನರ ಸಲುವಾಗಿ ಕಾನ್ಸ್ಟಿಟ್ಯೂಷನ್ ಪ್ರಕಾರ ಅವರಿಗೆ ಏನು ಅದ್ಯತೆ ಕೊಡಬೇಕೋ ಅದನ್ನು ಕೊಡುತ್ತಾ ಇದ್ದೇವೆ.

Sri K. H. PATIL.—I fail to understand and even today what is meant by Vulnerable sections and I would like to know in what clear terms of the definition the Government has to accept, I want the suggestions from the Hon. Members.

ಶ್ರೀ ಕೆ. ಸಿದ್ದಯ್ಯ.—ಈ ಹಿಂದೆ ಸರ್ಕಾರದವರೇ 'ದುರ್ಬಲ ವರ್ಗ; ಎಂದರೆ ಹರಿಜನರು, ಗಿರಿಜನರು ಮತ್ತು ಇತರೇ ಹಿಂದುಳಿದ ವರ್ಗದವರು ಎಂದು ಒಂದು ಸೂತ್ರವನ್ನು ಹೇಳಿ ಈ ದಿವಸ ಈ ದುರ್ಬಲವರ್ಗದವರು ಎಂದರೆ ಯಾರೆಂಬುದನ್ನು ತಿಳಿಸಿ ಎಂದು ನನಗೇ ತಾವು ಕೇಳುತ್ತಿರುವುದರ ಉದ್ದೇಶವಾದರೂ ಏನು ?

(ಉತ್ತರವಿಲ್ಲ)

ಶ್ರೀ ಪಿ. ಪಿ. ಹೆಗಡೆ.—ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ರಾಜ್ಯದಲ್ಲಿ ಹಿಂದುಳಿದ ಶೇ 40 ರಷ್ಟು ಜನರಲ್ಲಿ ಯಾರು ದುರ್ಬಲವರ್ಗದವರು ಎಂಬುದನ್ನು ನಿರ್ಧಾರ ಮಾಡುವುದಕ್ಕೆ ಏನು ತೊಂದರೆ ಇದೆ ?

Sri K. H. PATIL.—As the Hon. Members are aware, the Scheduled Castes and Scheduled Tribes have been defined in clear terms. Women also comes under the weaker sections. The most forward class consists of weaker sections. Therefore, it is very difficult for the Government to define in clear terms. By Vulnerable Sections, we mean, the most weaker sections in the society, the section which has been neglected in all spheres of activities.

ಶ್ರೀ ಎಂ. ಬಿ. ರಾಮಸ್ವಾಮಿ.—ತಾಲ್ಲೂಕ್ ಅಡ್ವೈಜರಿ ಸಮಿತಿಗಳೀನಿವೆ ಇವು ತಿಂಗಳಿಗೊಂದು ಸಾರಿಯಾದರೂ ಸೇರುವುದಿಲ್ಲ ಆದುದರಿಂದ ಸರ್ಕಾರದವರು ಈ ಸಮಿತಿಗಳನ್ನು ಕನಿಷ್ಟ ಪಕ್ಷ ತಿಂಗಳಿಗೆ ಒಂದು ಸಾರಿಯಾದರೂ ಸೇರುವಂತೆ ಒಂದು ಆದೇಶವನ್ನು ನೀಡರಾಗುತ್ತಿದೆಯೆ ?

ಶ್ರೀ ಕೆ. ಎಚ್. ಪಾಟೀಲ್.—ತಿಂಗಳಿಗೆ ಎರಡು ಸಾರ್ತಿ ಸೇರಿದರೂ ತೊಂದರೆ ಇಲ್ಲ. As and when necessary, I will instruct the Deputy Commissioner to call the meeting and take the decision.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಕೇಂದ್ರ ಸರ್ಕಾರದವರು ರಕೆಜ್ಯ ಸರ್ಕಾರಗಳಿಗೆ ಕಳುಹಿಸಿರತಕ್ಕ ಸುತ್ತೋಲೆಯಲ್ಲಿ ಈ ವಲ್ನರಬಲ್ ವರ್ಗದವರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಬೇಕೆಂದು ಹೇಳಿದ್ದಾರೆ. ಆದರೆ ಇಲ್ಲಿ ಸರ್ಕಾರದವರು (ಅ) ಪ್ರಶ್ನೆಗೆ ಒದಗಿಸಿರತಕ್ಕ ಉತ್ತರಕ್ಕನುಸಾರವಾಗಿ ಈ ದುರ್ಬಲ ವರ್ಗದವರ ಅಂಕೀ ಅಂಶಗಳನ್ನು ಸಂಗ್ರಹಣೆ ಮಾಡಲಾಗಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಈ ವಿಚಾರದಲ್ಲಿ ನಿರ್ದಿಷ್ಟವಾದ ಒಂದು ಸೂತ್ರವಿಲ್ಲ. I would like to be guided by the suggestions from the Hon. Members of this House as well as the Upper House to know definitely which is the vulnerable section.

ಶ್ರೀ ಕೋಣಂದೂರು ಲಿಂಗಪ್ಪ.—ಈ ಪ್ರಶ್ನೆಯ ಬಗ್ಗೆ ಅರ್ಧ ಗಂಟೆಯ ಚರ್ಚೆಗೆ ಅವಕಾಶ ಮಾಡಿಕೊಡುವರೇ ?

ಶ್ರೀ ಕೆ. ಎಚ್. ಪಾಟೀಲ್.—ಅದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಎಷ್ಟು ಮಾತನಾಡಿದರೂ ಇರುವುದು ಬದಲಾಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ.—ಮಾನ್ಯ ಸಚಿವರಿಗೇ ಈ ಜನರು ಯಾರೆಂಬುದನ್ನು ನಿರ್ಧರಿಸುವುದಕ್ಕೆ ಕಷ್ಟವಾಗಿದ್ದರೆ ಇನ್ನು ಅಲ್ಲಿ ಇವರಿಗೆ ಅನುಕೂಲ ಮಾಡಲು ಮಾಡಿರತಕ್ಕ ಆ ಕಮಿಟಿಯವರಿಗೆ ಇದನ್ನು ನಿರ್ಧರ ಮಾಡುವುದರಲ್ಲಿ ಎಷ್ಟು ತೊಂದರೆ ಇದೆ ಎಂಬುದು ಅರ್ಥವಾಗುತಿಲ್ಲಷೇ ಮತ್ತು ಇಂಥ ಅನಾನುಕೂಲವಿದ್ದಾಗ ಇದನ್ನು ಮಾಡಿದ್ದರಿಂದ ಆದ ಸಾರ್ಥಕತಾದರೂ ಏನು ? ಆ ಜನಕ್ಕೇನು ಪ್ರಯೋಜನವಾಯಿತು ?

ಶ್ರೀ ಕೆ. ಎಚ್. ಪಾಟೀಲ್.—ಆ ಕಾರ್ಯಕ್ಷಮತೆಯನ್ನು ಗಮನಿಸಿಯೇ ಸರ್ಕಾರದವರು ಈ ದುರ್ಬಲವರ್ಗದವರಿಗೆ ತೊಂದರೆಯಾಗದಿರಲೆಂದೇ ಅಲ್ಲಿ ಆಹಾರವನ್ನು ಬೇರೆಯವರಿಗೂ ಸಹಾ ಹಂಚಿ ಎಂದು ಹೇಳಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಪ್ರಶ್ನೆಯ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಏಕೆ ಕೊಡಬಾರದು.

ಅಧ್ಯಕ್ಷರು.—ಇಲ್ಲಿ 6 ದಿನಗಳ ಕಾಲ ಬಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆ ನಡೆಯುತ್ತದೆ ಆಗ ಮಾನ್ಯ ಸದಸ್ಯರು ಏನು ಬೇಕಾದರೂ ಹೇಳಬಹುದು.